## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ

### ವಿಷಯ

ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಕಿರಿಯ ತರಬೇತಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಅನುದಾನಿತ ಕಾಲೇಜನ್ನು ಮುಚ್ಚಿದಂತ ಸಂದರ್ಭದಲ್ಲಿ ಸದರಿ ಹುದ್ದೆಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ, ಕಾಲೇಜುಗಳಲ್ಲಿ ಅನುದಾನಿತ ಸಿಬ್ಬಂದಿಗಳನ್ನು ಅನುದಾನಿತ ಶಿಕ್ಷಣ ಸಂಸ್ಥೆ ಮುಚ್ಚಿದಾಗ ಆ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಇತರೆ ಅನುದಾನಿತ ಅಥವಾ ಸರ್ಕಾರಿ ಶಾಲಾ ಕಾಲೇಜುಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಪದ್ಧತಿ ಇರುತ್ತದೆ. ಆದರೆ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳನ್ನು ಬೇರೊಂದು ಅನುದಾನಿತ/ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ನಿಯೋಜನೆ ಮಾಡದೆ ಹಲವಾರು ಸಿಬ್ಬಂದಿಯವರಿಗೆ ತೊಂದರೆ ಉಂಟಾಗಿರುವ ವಿಷಯವನ್ನು ನಿಯಮ 72 ರಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಹಾಗು ಕೌಶಲ್ಯಾಭಿವೃದ್ಧಿ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

### ಹೇಳಿಕೆ

ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ವಿವಿಧ ಕಾರಣಗಳಿಂದ ಮುಚ್ಚಿದಾಗ ಸದರಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಕಾರ್ಯನಿವಹಿಸುತ್ತಿರುವ ಅನುದಾನಿತ ಸಿಬ್ಬಂದಿಗಳನ್ನು ಇತರೆ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಅನುದಾನಿತ ಖಾಲಿ ಹುದ್ದೆಗಳ ಎದುರಿಗೆ ಕಾರ್ಯಭಾರ ಹಂಚಿಕೆ ಮಾಡಿ ವರ್ಗಾವಣೆ ಗೊಳಿಸಿ, ಸ್ಥಳ ನಿಯುಕ್ತಿಗೊಳಿಸಲು ಪರಿಷ್ಕೃತ ಅನುದಾನ ಸಂಹಿತೆ-2025ರಲ್ಲಿನ ಚಾಪ್ಟರ್ -V ನಿಯಮ-8 ಕಂಡಿಕೆ 23(d) ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ: ಕೌಉಜೀಇ 27 ಕೈತಇ 2025 ದಿನಾಂಕ : 11.05.2026 ರ ಪತ್ರದಲ್ಲಿ ವಿವಿಧ ಕಾರಣಗಳಿಂದ ಮುಚ್ಚಲ್ಪಟ್ಟ ಸಂಸ್ಥೆಗಳ ಸಿಬ್ಬಂದಿಗಳನ್ನು ಇತರೆ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ವರ್ಗಾವಣೆ ಮಾಡಲು ತಿಳಿಸಿರುತ್ತಾರೆ. ಕೆಲವೊಂದು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಆಡಳಿತ ಮಂಡಳಿಯವರು ಮುಚ್ಚಿರುತ್ತಾರೆ ಹಾಗೂ ಕೆಲವೊಂದು ಸಂಸ್ಥೆಗಳಲ್ಲಿನ ವೃತ್ತಿ/ಘಟಕಗಳಿಗೆ ಪ್ರವೇಶಾತಿ ಮಾಡದಿರುವುದರಿಂದ ಹೆಚ್ಚುವರಿಯಾಗಿರುವ ಅನುದಾನಿತ ಸಿಬ್ಬಂದಿರವರನ್ನು ಪರಿಷ್ಕೃತ ಅನುದಾನ ಸಂಹಿತೆ-2025ರಲ್ಲಿನ ನಿಯಮದಂತೆ ಸಕ್ಷಮ ಪ್ರಾಧಿಕಾರದಿಂದ ಈ ಕೆಳಕಂಡ 05 ಸಂಸ್ಥೆಗಳಲ್ಲಿನ ಸಿಬ್ಬಂದಿಗಳನ್ನು ಇತರೆ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳ ಎದುರಿಗೆ ವರ್ಗಾವಣೆಗೊಳಿಸಿ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ. ಕೆಲವೊಂದು ಸಂಸ್ಥೆಯ ಆಡಳಿತ ಮಂಡಳಿಯವರು ಆಡಳಿತಾತ್ಮಕ ಕಾರಣಗಳನ್ನು ನೀಡಿ ವರ್ಗಾವಣೆಗೊಳಿಸಿದ ಸಿಬ್ಬಂದಿಯವರನ್ನು ಕರ್ತವ್ಯಕ್ಕೆ ವರದಿ ಮಾಡಿಸಿಕೊಂಡಿರುವುದಿಲ್ಲ. ಆದ್ದರಿಂದ ಸದರಿ ಸಿಬ್ಬಂದಿಯನ್ನು ಪುನಃ ಬೇರೊಂದು ಅನುದಾನಿತ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳ ಎದುರಿಗೆ ವರ್ಗಾಯಿಸಲಾಗಿರುತ್ತದೆ.

| ಕ್ರ ಸಂ | ಮುಚ್ಚಿರುವ ಹಾಗೂ ಕೆಲವೊಂದು ವೃತ್ತಿ- ಘಟಕಗಳಿಗೆ ಪ್ರವೇಶಾತಿ ಪಡೆಯದಿರುವ ಸಂಸ್ಥೆಯ ಹೆಸರು | ವರ್ಗಾವಣೆಗೊಳಿಸಲಾದ ಸಿಬ್ಬಂದಿಗಳ ಸಂಖ್ಯೆ | |
|---|---|---|---|
| | | ಬೋಧಕ ಸಿಬ್ಬಂದಿ | ಬೋಧಕೇತರ ಸಿಬ್ಬಂದಿ |
| 01 | ಟಿ.ಟಿ.ಸಿ.ಡಿ. ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ, ನಂ-28/2 ಹೇನ್ಸ್ ರಸ್ತೆ ಹತ್ತಿರ, ಹೊಸ ಬೆಂಬೂ ಬಜಾರ್ ರೋಡ್ ಬೆಂಗಳೂರು-51 (2019 ರಿಂದ ಸಂಸ್ಥೆ ಮುಚ್ಚಲಾಗಿರುತ್ತದೆ.) | 08 | 02 |

--2

| | | | |
|---|---|---|---|
| 02 | ರಾಮೇಶ್ವರ ಖಾಸಗಿ ಅನುದಾನಿತ ಕೈ.ತ.ಸಂ ಅರಸೀಕೆರೆ, ಹಾಸನ ಜಿಲ್ಲೆ. ( 2015 ರಿಂದ ಸಂಸ್ಥೆ ಮುಚ್ಚಲಾಗಿರುತ್ತದೆ.) | 06 | 05 |
| 03 | ರಾಘವೇಂದ್ರ ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು (MR&TV, Fitter ವೃತ್ತಿಯಲ್ಲಿನ 02 ಘಟಕಗಳ ಸಂಯೋಜನೆ ರದ್ದಾಗಿರುತ್ತದೆ) | 02 | 02 |
| 04 | ಬಿ.ಬಿ.ಫಾತಿಮಾ ಕೈಗಾರಿಕಾ ತರಬೇತಿ ಸಂಸ್ಥೆ ಬೆಂಗಳೂರು (MR&TV, ವೃತ್ತಿಯಲ್ಲಿನ 01 ಘಟಕದ ಸಂಯೋಜನೆ ರದ್ದಾಗಿರುತ್ತದೆ) | 01 | 00 |
| 05 | ಕ್ಸೇವಿಯರ್ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ ಅಸೈಗೋಳಿ ಕೋಣಾಜೆ ಮಂಗಳೂರು (ಆಡಳಿತ ಮಂಡಳಿಯವರು ಪ್ರಸ್ತುತ ಸಾಲಿನಿಂದ ಸಂಸ್ಥೆಯನ್ನು ಮುಚ್ಚಲು ತೀರ್ಮಾನಿಸಿರುತ್ತಾರೆ.) | 02 | 01 |
| | **ಒಟ್ಟು ಸಿಬ್ಬಂದಿಗಳು** | **19** | **10** |

ವಿವಿಧ ಕಾರಣಗಳಿಂದ ಮುಚ್ಚಲ್ಪಟ್ಟ ಅನುದಾನಿತ ಸಂಸ್ಥೆಗಳ ಸಿಬ್ಬಂದಿಗಳಿಂದ ಸ್ವೀಕೃತಿಗೊಂಡಿರುವ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ಅನುದಾನ ಸಂಹಿತೆ-2025ರ ನಿಯಮಾನುಸಾರ ಇತರೆ ಅನುದಾನಿತ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳ ಎದುರಿಗೆ ವರ್ಗಾಯಿಸಲಾಗಿರುತ್ತದೆ ಹಾಗೂ ಸ್ವೀಕೃತಗೊಳ್ಳುವ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು.

**ಕೌಉಂಜೀಇ 44 ಕೈತಪ್ರ 2026**

(ಡಾ. ಶರಣಪ್ರಕಾಶ ಆರ್ ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.